## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 405 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 10/07/2023 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗಳಲ್ಲಿ ಸರಿಯಾದ ಸಮಯದಲ್ಲಿ ಸೂಕ್ತವಾದ ಚಿಕಿತ್ಸೆ ದೊರೆಯದೆ ಬಾಣಂತಿಯರು ಸಾವನ್ನಪ್ಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮಗಳೇನು. | ಬಂದಿದೆ.<br><br>ತಾಯಂದಿರ ಮರಣ ಪ್ರಮಾಣ ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.-<br>1. ರಾಜ್ಯದ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ನೆರವೇರಿಸುತ್ತಿರುವ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರುಗಳಿಗೆ, ವೈದ್ಯರುಗಳಿಗೆ ಮತ್ತು ಶುಶ್ರೂಷಕಾಧಿಕಾರಿಗಳಿಗೆ ಪ್ರಸವ ಪೂರ್ವ ಮತ್ತು ಪ್ರಸವೋತ್ತರದ ಹೆರಿಗೆ ಕೌಶಲ್ಯದ ಆರೈಕೆಯ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ದಕ್ಷತಾ ತರಬೇತಿಯನ್ನು ನೀಡಲಾಗುತ್ತಿದೆ. ತಾಯಿ ಮರಣವನ್ನು ಕಡಿಮೆ ಮಾಡಲು ಆರೋಗ ಸಂಸ್ಥೆಗಳಲ್ಲಿ ಗುಣಮಟ್ಟವನ್ನು ಹೆಚ್ಚಿಸಲು "ಲಕ್ಷ್ಯ" ಎಂಬ ಕಾರ್ಯಕ್ರಮವನ್ನು 2018ರಿಂದ ಅನುಷ್ಠಾನಗೊಳಿಸಲಾಗಿದ್ದು, ರಾಜ್ಯದಲ್ಲಿರುವ 124 ಹೆಚ್ಚು ಹೆರಿಗೆ ಒತ್ತಡವಿರುವ ಆಸ್ಪತ್ರೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದು, ಈ ಆಸ್ಪತ್ರೆಗಳಲ್ಲಿ ಗುಣಮಟ್ಟದ ಆರೈಕೆಯನ್ನು ಲಕ್ಷ್ಯ ಪ್ರಾಮಾಣೀಕರಣವನ್ನು ಕೈಗೊಳ್ಳಲಾಗುತ್ತಿದ್ದು, ಇದುವರೆಗೂ 108 ಹೆರಿಗೆ ಕೇಂದ್ರಗಳನ್ನು ಪ್ರಾಮಾಣೀಕರಣಗೊಂಡಿರುತ್ತವೆ. ಈ ಎಲ್ಲಾ ಆಸ್ಪತ್ರೆಗಳಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳಲು ಶ್ರಮಿಸಲಾಗುತ್ತಿದೆ.<br>2. ತಾಯಿ ಮರಣವನ್ನು ಕಡಿಮೆ ಮಾಡಲು ರಾಜ್ಯದ ಎಲ್ಲಾ ಹೆರಿಗೆ ಕೇಂದ್ರಗಳಲ್ಲಿ NQAS ಅಡಿಯಲ್ಲಿ ಉನ್ನತೀಕರಿಸಲು ಇಲಾಖೆಯು ಮುಂದಾಗಿರುತ್ತದೆ ಮತ್ತು ಕ್ರಮವನ್ನು ಜರುಗಿಸಲಾಗುತ್ತಿದೆ. ಇದುವರೆಗೂ 136 ಆರೋಗ್ಯ ಸಂಸ್ಥೆಗಳು NQAS ಅಡಿಯಲ್ಲಿ ಪ್ರಾಮಾಣೀಕರಣಗೊಂಡಿರುತ್ತವೆ.<br>3. ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಗರ್ಭಿಣಿ ಮತ್ತು ಹೆರಿಗೆ ಆರೈಕೆಯಲ್ಲಿ ಪ್ರಾತಿನಿಧ್ಯಗೊಳಲು ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳನ್ನು ಸ್ಥಾಪಿಸಲಾಗುತ್ತಿದ್ದು, ಇದುವರೆಗೂ, 45 ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳನ್ನು ಕಾರ್ಯಗತಗೊಳಿಸಲಾಗಿದೆ.<br>4. ರಕ್ತಹೀನತೆಯನ್ನು ಗರ್ಭಿಣಿ ಮತ್ತು ಬಾಣಂತಿಯರಲ್ಲಿ ಹೋಗಲಾಡಿಸಲು ಅನೀಮಿಯಾ ಮುಕ್ತ ಭಾರತದ ಮಾರ್ಗಸೂಚಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಎಲ್ಲಾ ವರ್ಗಗಳ ಗರ್ಭಿಣಿಯರಿಗೆ IFA ಮಾತ್ರೆಗಳನ್ನು 6 ತಿಂಗಳ ಪ್ರಸವ ಪೂರ್ವ ಮತ್ತು 6 ತಿಂಗಳ ಪ್ರಸವೋತ್ತರದಲ್ಲಿ ಉಚಿತವಾಗಿ ನೀಡಲಾಗುತ್ತಿದೆ.<br>5. ಮಧ್ಯಮ ಮತ್ತು ತೀವ್ರತರಹದ ರಕ್ತಹೀನತೆಯಿಂದ ಬಳಲುತ್ತಿರುವ ಗರ್ಭಿಣಿಯರಿಗೆ Iron Sucrose ಚುಚ್ಚುಮದ್ದನ್ನು ಉಚಿತವಾಗಿ ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ನೀಡಲಾಗುತ್ತಿದೆ.<br>6. ಸಾಂಸ್ಥಿಕ ಹೆರಿಗೆಯಿಂದ ತಾಯಿ ಮರಣ ಕಡಿಮೆಯಾಗುವುದರಿಂದ ಹಾಗೂ ಸಾಂಸ್ಥಿಕ ಹೆರಿಗೆಯನ್ನು ಉತ್ತೇಜಿಸಲು ಜನನಿ ಸುರಕ್ಷಾ ಯೋಜನ ಎಂಬ ಫಲಾನುಭವಿ ಆಧಾರಿತ ನಗದು ವರ್ಗಾವಣೆ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ.<br>7. ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಎಲ್ಲಾ ವರ್ಗದ ಗರ್ಭಿಣಿ ಮತ್ತು ಬಾಣಂತಿಯರಿಗೆ ಪ್ರಸವ ಪೂರ್ವ ಪ್ರಸವ ಮತ್ತು ಪ್ರಸವ ನಂತರದ ಆರೈಕೆಯನ್ನು ಒದಗಿಸಲು ಜನನಿ ಶಿಶು ಸುರಕ್ಷಾ ಯೋಜನೆ ಎಂಬ ಕಾರ್ಯಕ್ರಮವನ್ನು |

| | | |
|---|---|---|
| | | ಜಾರಿಗೊಳಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಹೆರಿಗೆ ಸೇವೆಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಇದರಿಂದ ತಾಯಿ ಮರಣ ಪ್ರಮಾಣವು ಕಡಿಮೆಯಾಗುತ್ತಿದೆ.<br>8. ಕ್ಲಿಷ್ಟಕರ/ತೊಂದರೆಗೆ ಒಳಗಾಗುವ ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ರಾಜ್ಯದ 18 ಜಿಲ್ಲಾ ಆಸ್ಪತ್ರೆಗಳಲ್ಲಿ ಪ್ರಸೂತಿ ICU/HDU ಗಳನ್ನು ಸ್ಥಾಪಿಸಲಾಗಿರುತ್ತದೆ ಮತ್ತು ಇದರ ಸೇವೆಗಳನ್ನು ಗರ್ಭಿಣಿ ಮತ್ತು ಬಾಣಂತಿಯರು ವಡೆದುಕೊಳ್ಳುತ್ತಿದ್ದಾರೆ<br>9. ತಾಯಿ ಮರಣವನ್ನು ಕಡಿಮೆ ಮಾಡಲು ಹಾಗೂ ಸಹಜ ಹೆರಿಗೆಗಳನ್ನು ಉತ್ತೇಜಿಸಲು ಮಿಡವೈಫರಿ ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.<br>10. ಎಲ್ಲಾ ಗರ್ಭಿಣಿಯರಿಗೆ ಕನಿಷ್ಠ ಒಂದು ಅಲ್ಟ್ರಾಸೋನೋಗ್ರಾಫಿ ಯನ್ನು ನೆರವೇರಿಸಬೇಕಾಗಿದ್ದು, ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ಕ್ಯಾನಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಸ್ಕ್ಯಾನಿಂಗ ನೆರವೇರಿಸಲು ಪ್ರಸೂತಿ ತಜ್ಞರಿಗೆ ತರಬೇತಿಯನ್ನು ನೀಡಲಾಗುತ್ತಿದೆ.<br>11. ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ 24/7 ಸಿಜೇರಿಯನ್ ಹೆರಿಗೆ ವ್ಯಸ್ಥೆಯನ್ನು ಕಲ್ಪಿಸಲು ಕಡ್ಡಾಯ ಗ್ರಾಮೀಣ ಸೇವೆಯಲ್ಲಿ ತಜ್ಞರನ್ನು ನೇಮಿಸಿಕೊಳ್ಳಲಾಗುತ್ತಿದೆ. ಇದರಿಂದ 24/7 ಸಮಗ್ರ ಪ್ರಸೂತಿ ಆರೈಕೆಯನ್ನು ನೀಡಲು. ಎಲ್ಲಾ ಆಸ್ಪತ್ರೆಗಳಲ್ಲಿ ಸಹಾಯಕವಾಗುತ್ತಿದ್ದು, ಜಿಲ್ಲಾ ಆಸ್ಪತ್ರೆಗೆ ಗರ್ಭಿಣಿಯರನ್ನು ಶಿಫಾರಸ್ಸು ಮಾಡುವುದು ಕಡಿಮೆಯಾಗುತ್ತದೆ.<br>12. ಅದಾಗ್ಯೂ, ಸಮುದಾಯ ಆರೋಗ್ಯ ಕೇಂದ್ರ ಮಟ್ಟದಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು ಮತ್ತು ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಎಂ.ಬಿ.ಬಿ.ಎಸ್ ತೇರ್ಗಡೆಗೊಂಡ ವೈದ್ಯರುಗಳಿಗೆ 6 ತಿಂಗಳ CEmONC ಮತ್ತು LSAS ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಎಂ.ಬಿ.ಬಿ.ಎಸ್. ವೈದ್ಯರಿಗೆ ಸಹಜ ಹೆರಿಗೆಗಳನ್ನು ಸುಸೂತ್ರವಾಗಿ ನೆರವೇರಿಸಲು BEmONC ತರಬೇತಿಯನ್ನು ಸಹ ನೀಡಲಾಗುತ್ತಿದೆ.<br>13. ಬಾಣಂತಿಯರಿಗೆ ಮನೆ ಮನೆ ಭೇಟಿಗಳನ್ನು ಕಿರಿಯ ಮಹಿಳಾ ಆರೋಗ್ಯ ಸಹಾಯಕರು, ಆಶಾ ಕಾರ್ಯಕರ್ತೆಯರು ನೆರವೇರಿಸುತ್ತಿದ್ದಾರೆ. ಇದರಿಂದ ಬಾಣಂತಿಯರಲ್ಲಿ ಉದ್ಭವಿಸುವ ತೊಂದರೆಗಳಾದ ಸೋಂಕು, ರಕ್ತ ಸ್ರಾವ, ಅಧಿಕ ರಕ್ತ ಒತ್ತಡ ಮುಂತಾವುಗಳನ್ನು ಪತ್ತೆ ಹಚ್ಚಿ, ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ಶಿಫಾರಸ್ಸು ಮಾಡುತ್ತಾರೆ. |
| ಇ) | ಸಾರ್ವಜನಿಕ ಆಸ್ಪತ್ರೆಗಳಲ್ಲಿ ಹೆರಿಗೆಗೆ ದಾಖಲಾದ ಮಹಿಳೆಯರಿಗೆ ಸಕಾಲದಲ್ಲಿ ಚಿಕಿತ್ಸೆ ದೊರೆಯಲು ಹಣದ ಆಮಿಷ ಒಡ್ಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ತಗೆದುಕೊಂಡಿರುವ ಕ್ರಮಗಳೇನು; | **ಬಂದಿದೆ**<br>ಇದನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನುಕೈಗೊಳ್ಳಲಾಗಿದೆ.<br>1. ಆಸ್ಪತ್ರೆಯಲ್ಲಿ ನಾನಾ ಕಡೆ CC TV ಗಳನ್ನು ಅಳವಡಿಸಲಾಗಿದೆ.<br>2. Patient feedback report ಪಡೆಯಲಾಗುತ್ತಿದೆ. ಇದರ ಆಧಾರದ ಮೇಲೆ ಸಂಬಂಧಪಟ್ಟ ವಿಭಾಗಗಳ ಸಿಬ್ಬಂದಿವರಿಗೆ ನೋಟೀಸ್ ಜಾರಿ ಮಾಡಿ ಮತ್ತು ಕಲವು ಕಡೆ ಸಿಬ್ಬಂದಿಯವರನ್ನು ಆಸ್ಪತ್ರೆಯ ಬೇರೆ ವಿಭಾಗಕ್ಕೆ ವರ್ಗಾಯಿಸಲಾಗಿರುತ್ತದೆ.<br>3. Mera Aspataal ತಂತ್ರಾಂಶದಲ್ಲಿ ಇದರ ಬಗ್ಗೆ ವರದಿಯನ್ನು ಸ್ವೀಕರಿಸಿ ಕ್ರಮಗಳನ್ನು ಜರುಗಿಸಲಾಗುತ್ತಿದೆ.<br>4. ದೂರು/ಸಲಹೆ ಪೆಟ್ಟಿಗೆಯನ್ನು ಎಲ್ಲಾ ಆರೋಗ್ಯ ಕೇಂದ್ರ, ಆಸ್ಪತ್ರೆಗಳಲ್ಲಿ ಅಳವಡಿಸಲಾಗಿದೆ. ಈ ದೂರುಗಳನ್ನು ತಾಲೂಕು ಆರೋಗ್ಯಾಧಿಕಾರಿಗಳು/ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಹಾಗೂ ಆರೋಗ್ಯ ರಕ್ಷಾ ಸಮಿತಿಯ ಸದಸ್ಯರ ಸಮ್ಮುಖದಲ್ಲಿ ತೆರೆದು ಅಂತಹ ದೂರುಗಳು ಬಂದಿದ್ದಲ್ಲಿ ಸಂಬಂಧಿಸಿದ ಸಿಬ್ಬಂದಿಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಲು ಅವಕಾಶವಿರುತ್ತದೆ. |

| | | |
|---|---|---|
| ಇ) | ತಾಯಂದಿರ ಮರಣ ಪ್ರಮಾಣವನ್ನು ಕಡಿಮೆ ಮಾಡಲು ಸರ್ಕಾರ ತಗೆದುಕೊಂಡಿರುವ ಕ್ರಮಗಳೇನು? | 1. (ಅ) 2005ರಿಂದ ಜನನಿ ಶಿಶು ಸುರಕ್ಷಾ ಯೋಜನೆ (JSY) ಕಾರ್ಯಕ್ರಮ ಅನುಷ್ಠಾನ. (ಆ) 2010ರಿಂದ ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (JSSK) ಯೋಜನೆಯ ಅನುಷ್ಠಾನ. (ಇ) 2013ರಿಂದ 2017ವರೆಗೆ ತಾಯಿ ಭಾಗ್ಯ ಮತ್ತು ಪ್ರಸೂತಿ ಆರೈಕ ಕಾರ್ಯಕ್ರಮ ಅನುಷ್ಠಾನಗಳಿಸಲಾಗಿದೆ.<br>2. ಕರ್ನಾಟಕ ರಾಜ್ಯದಲ್ಲಿ 24.08.2016ರಿಂದ ಪ್ರತಿ ತಿಂಗಳು 9ನೇ ತಾರೀಖಿನಂದು ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನವನ್ನು ಎಲ್ಲಾ ಸರ್ಕಾರಿ ಹರಿಗೆ ಆಸ್ಪತ್ರೆಗಳಲ್ಲಿ ಹಾಗೂ 24x7 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ಗರ್ಭಿಣಿಯರಿಗೆ ಗುಣಮಟ್ಟದ ಆರೈಕೆ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. 24.01.2023ರಿಂದ ಪ್ರತಿ ತಿಂಗಳು e-PMSMA ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಈ ದಿನದಂದು ವಿಶೇಷವಾಗಿ ತೊಡಕಿನ ಗರ್ಭಿಣಿಯರನ್ನು ಆರೈಸಲಾಗುತ್ತದೆ.<br>3. ರಾಷ್ಟ್ರೀಯ ಆರೋಗ್ಯ ಅಭಿಯಾನ ವತಿಯಿಂದ 2018ರಲ್ಲಿ ಲಕ್ಷ್ಯ ಕಾರ್ಯಕ್ರಮವನ್ನು 125 ಹೆರಿಗೆ ಆಸ್ಪತ್ರೆಗಳಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಇವುಗಳಲ್ಲಿ ಈಗಾಗಲೇ 108 ಆಸ್ಪತ್ರೆಗಳಿಗೆ ಪ್ರಮಾಣೀಕರಿಸಲಾಗಿದೆ ಮತ್ತು ಮಾತೃ ಆರೈಕೆಯ ಗುಣಮಟ್ಟವನ್ನು ಕಾಪಾಡಿಕೊಳ್ಳಲಾಗಿರುತ್ತದೆ.<br>4. 289 FRUsಗಳಲ್ಲಿ ಇದುವರೆಗೂ 245 ಆಸ್ಪತ್ರೆಗಲ್ಲಿ ಕಾರ್ಯಗತಗೊಳಿಸಲಾಗಿದೆ. ಉಳಿದ 44 ಆಸ್ಪತ್ರೆಗಳನ್ನು ಮುಂದಿನ ದಿನಗಳಲ್ಲಿ ತಜ್ಞರ ನೇಮಕಾತಿಯಿಂದ Caesarean ಸೇವೆಗಳಿಗೆ ಕಾರ್ಯಗತಗೊಳಿಸಲಾಗುವುದು.<br>5. ಕೆಳ ಹಂತದ ಆಸ್ಪತ್ರೆಗಳಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ತಾಲೂಕು ಮಟ್ಟದ ಆಸ್ಪತ್ರೆಗಳನ್ನು ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿ 24x7 ಹೆರಿಗೆಗಾಗಿ ಕಾರ್ಯಗತಗೊಳಿಸಲಾಗುವುದು. ಕೆಳ ಹಂತದ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು ಮತ್ತು ಸಿಬ್ಬಂದಿಗಳಿಗೆ ಕೌಶಲ್ಯ ಆಧಾರಿತ ದಕ್ಷತಾ ಹಾಗೂ ದಕ್ಷ ತರಬೇತಿಯನ್ನು ನೀಡಲಾಗುತ್ತಿದ್ದು, ಪುನರ್ಮನನ ತರಬೇತಿಯನ್ನು ಸಹ ನೀಡಲಾಗುವುದು.<br>6. ಕೆಳಹಂತದ ಆಸ್ಪತ್ರೆಗಳ ಕಾರ್ಯನಿರ್ವಹಣ ಅಂಶಗಳಾದ ಮಾಸಿಕ ಹೆರಿಗೆಗಳು, ಗುಣಮಟ್ಟ, ಗರ್ಭಿಣಿ, ಬಾಣಂತಿಯರ ಆರೈಕೆ ಮುಂತಾದವುಗಳನ್ನು ಮೇಲ್ವಿಚಾರಣೆ ಮಾಡಲಾಗುವುದು. ಕೆಳ ಹಂತದ ಆಸ್ಪತ್ರೆಗಳ referral (ಶಿಫಾರಸ್ಸು) ಪ್ರತಿ ತಿಂಗಳು ಮೇಲ್ವಿಚಾರಣೆ ಮಾಡುವುದು. |

(HFW/31/HSD/2023)

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.